AKSHARASURYA
ISSN: 2583-620X
Peer-Reviewed, Multi Lingual E-Journal
Volume – 02, Issue – 02, February 2023.

# ದಾಸಸಾಹಿತ್ಯದಲ್ಲಿ ಒಗಟುಗಳು

**ತಿಪ್ಪೇರುದ್ರಯ್ಯ ಸಿದ್ದಯ್ಯ ಮಠದ**
ಸಂಶೋಧನಾ ವಿದ್ಯಾರ್ಥಿ
ಹಸ್ತಪ್ರತಿಶಾಸ್ತ್ರ ವಿಭಾಗ ಕ.ವಿ.ವಿ ಹಂಪಿ.
ವಿದ್ಯಾರಣ್ಯ–583276

ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ವಚನಸಾಹಿತ್ಯವು ಕನ್ನಡ ಸಾಹಿತ್ಯ ಲೋಕಕ್ಕೆ ನೀಡಿದ ಕೊಡುಗೆ ಅಪಾರ. ಅದೇ ರೀತಿಯಲ್ಲಿ ವಚನಸಾಹಿತ್ಯದ ನಂತರದಲ್ಲಿ ಬಂದ ದಾಸಸಾಹಿತ್ಯವು ಕನ್ನಡ ಸಾಹಿತ್ಯ ಲೋಕಕ್ಕೆ ಅಪಾರವಾದ ಸಾಹಿತ್ಯಿಕ ಸಂಪತ್ತನ್ನು ನೀಡಿ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದೆ. ದಾಸಸಾಹಿತ್ಯದಲ್ಲಿ ಆದ್ಯರೆನಿಸಿಕೊಂಡ ನರಹರಿತೀರ್ಥರಾಗಲಿ, ಶ್ರೀಪಾದರಾಜರಾಗಲಿ ತಮ್ಮ ಹಿತನುಡಿಗಳಿಂದ ಅಂದಿನ ಸಮಾಜದ ಅಂಕುಡೊಂಕುಗಳನ್ನು ಕುರಿತು ಹಾಡುಕಟ್ಟಿ ಹಾಡಿ ಜನರಿಗೆ ತಿಳಿಹೇಳುವ ಕಾರ್ಯ ಮಾಡಿದರು. ಈ ರೀತಿಯಲ್ಲಿ ಬೆಳೆದುಬಂದ ದಾಸಸಾಹಿತ್ಯ ಅನೇಕ ಮಹಾ ದಾಸಾರ್ಯರನ್ನು ತನ್ನ ಪ್ರಭಾವಕ್ಕೆ ಒಳಗು ಮಾಡಿಕೊಂಡು ಸಾಹಿತ್ಯ ರಚಿಸುವಂತೆ ಮಾಡಿತು. ವಾದಿರಾಜ, ಪುರಂದರಾದಾಸ, ಕನಕದಾಸ, ಜಗನ್ನಾಥದಾಸ, ಗೋಪಾಲದಾಸರು ಮುಂತಾದವರು ದಾಸಸಾಹಿತ್ಯಕ್ಕೆ ಉಪಯುಕ್ತ ಕೊಡುಗೆಗಳನ್ನು ನೀಡಿದ್ದಾರೆ. ದಾಸಸಾಹಿತ್ಯವು ಕೀರ್ತನೆ, ಉಗಾಭೋಗ, ಸುಳಾದಿ, ಕಾವ್ಯ, ಮುಂಡಿಗೆ ಹೀಗೆ ವಿವಿಧ ಪ್ರಕಾರಗಳಲ್ಲಿ ಹಂಚಿಹೋಗಿದೆ. ಈ ಎಲ್ಲ ಪ್ರಕಾರಗಳಲ್ಲಿ ದಾಸಾರ್ಯರು ಸಾಹಿತ್ಯದ ದಾಸೋಹ ನಡೆಸಿದ್ದಾರೆ.

ದಾಸಸಾಹಿತ್ಯವೆಂದಕೂಡಲೇ ನಾವು ಸಾಮಾನ್ಯವಾಗಿ ಕೀರ್ತನೆ, ಉಗಾಭೋಗ, ಸುಳಾದಿ, ಮುಂಡಿಗೆಗಳು ಎಂದುಕೊಳ್ಳುತ್ತೇವೆ. ಇದನ್ನು ಮಿರಿ ನಮ್ಮ ದಾಸಾರ್ಯರು ತ್ರಿಪದಿಗಳ ರೂಪದಲ್ಲಿ, ಸಂವಾದದರೂಪದಲ್ಲಿ, ಕನ್ನಡ ಸಾಹಿತ್ಯದ ಒಗಟುಗಳನ್ನು ಹೋಲುವಂತಹ ಮುಂಡಿಗೆಗಳನ್ನು ರಚಿಸುವ ಮೂಲಕ ಸಾಹಿತ್ಯರಸವನ್ನು ಉಣಬಡಿಸಿದ್ದಾರೆ. ಅಂತಹ ಅಪರೂಪದ ಒಗಟುಗಳನ್ನು ಪರಿಚಯಿಸಿದವರಲ್ಲಿ ನಮ್ಮ ಕನಕದಾಸರು, ಪುರಂದರದಾಸರು ಅಗ್ರಸ್ಥಾನದಲ್ಲಿದ್ದಾರೆ. ಇಂತಹ ಒಗಟುಗಳನ್ನು ದಾಸಸಸಾಹಿತ್ಯದಲ್ಲಿ ಕನಕದಾಸರು ಮುಂಡಿಗೆ ಎಂಬ ಹೆಸ–ರಿನಿಂದ ರಚಿಸಿದರೆ, ಪುರಂದರದಾಸರು ಸಂವಾದದ ರೀತಿಯಲ್ಲಿ ಒಗಟುಗಳನ್ನು ರಚಿಸಿದ್ದಾರೆ. ದಾಸಸಾಹಿತ್ಯದಲ್ಲಿ ಕಂಡುಬಂದಂತಹ ಇಂತಹ ಒಗಟುಗಳನ್ನು ಈ ಲೇಖನದಲ್ಲಿ ತಿಳಿಸುವ ಪ್ರಯತ್ನ ಮಾಡಿದ್ದೇನೆ.

ಶ್ರೀಮತ್ಪುರಂದರ ದಾಸಾರ್ಯರು ಭಕ್ತರಿಗೆ ಉಣಿಸದ ರಸವಿಲ್ಲ. ಇಂತಹ ರಸತುಂಬಿದ ಸುವರ್ಣ ಪಾತ್ರೆಗಳು ಬಹುಮಟ್ಟಿಗೆ ಸಿಗದಿದ್ದರೂ ದೊರೆತಷ್ಟು ಸಾಹಿತ್ಯಿಕ ಕೃತಿಗಳನ್ನು ನಮ್ಮ ಪೂರ್ವಜರು ಸಂಗ್ರಹಿಸಿ ಪ್ರಕಟಿಸಿದ್ದರಿಂದ ಅವುಗಳು ಇಂದು ನಮಗೆ ಲಭ್ಯವಾಗಿವೆ. ಕನಕದಸಾರು ಒಗಟನ್ನು ಹೋಲುವ ಮುಂಡಿಗೆಗಳನ್ನು ಬರೆದಿದ್ದಾರೆ. ಶ್ರೀ ಪುರಂದರದಾಸರು ಒಗಟುಗಳನ್ನು ಸಂವಾದದ ರೂಪದಲ್ಲಿ, ತ್ರಿಪದಿಯಲ್ಲಿ ರಚಿಸಿರುವುದನ್ನು ಕಾಣುತ್ತೇವೆ. ಹೀಗೆ ಒಗಟಿನ ರೂಪದ ರಚನೆಗಳನ್ನು ಕನಕದಾಸರು, ಪುರಂದರದಾಸರು ಮತ್ತು ಪ್ರಸನ್ನವೆಂಕಟದಾಸರಲ್ಲಿ ಕಾಣುತ್ತೇವೆ. ಇದರಲ್ಲಿ ಕನಕದಾಸರು ಮತ್ತು ಪುರಂದರದಾಸರ ಈ ರೀತಿಯ ರೂಪಗಳು ವಿಶಿಷ್ಟ ಸ್ಥಾನವನ್ನು ಪಡೆದುಕೊಂಡಿವೆ.

ಒಗಟುಗಳು ಪ್ರಮುಖವಾಗಿ ರೂಪಕ ಮೂಲದ್ದಾಗಿವೆ. ಒಗಟುಗಳ ಅರ್ಥವು ರಹಸ್ಯವಾಗಿರುತ್ತವೆ. ಇವು ವ್ಯಕ್ತಿಯ ಬುದ್ಧಿಕೌಶಲ್ಯವನ್ನು ಪರೀಕ್ಷಿಸುವ ಕೆಲಸವನ್ನು ಮಾಡುತ್ತವೆ. ಮೇಲ್ನೋಟಕ್ಕೆ ಅರ್ಥವಾಗದಿರುವಂತೆ ಕಂಡರೂ ಅದನ್ನು ಬಿಡಿಸಿ ಅರ್ಥೈಸಿದಾಗ ಅದರ ರಚನೆಯ ವೈಶಿಷ್ಟ್ಯತೆ ನಮಗೆ ತಿಳಿಯುತ್ತದೆ. ಹಲಸಿನಹಣ್ಣು ನೋಡಲು ಹೊರಗಡೆ ಒರಟಾಗಿ, ಮುಳ್ಳು–ಮುಳ್ಳಾಗಿ ಕಂಡರೂ ಅದನ್ನು ಬಿಡಿಸಿ ಅದರ ತೊಳೆಗಳನ್ನು ಸವಿದಾಗ ಸಿಗುವ ಸಿಹಿಯಂತೆ; ಒಗಟುಗಳು ಒಂದೇ ಬಾರಿಗೆ ಅರ್ಥವಾಗದಿದರೂ ಅದರ ಒಳಾರ್ಥ ನಮಗೆ ತಿಳಿದಾಗ ಅದರ ವೈಶಿಷ್ಟ್ಯವೇನೆಂಬುದು ನಮಗೆ ಅರ್ಥವಾಗುತ್ತದೆ. ಈ ಒಗಟುಗಳನ್ನು ದಾಸಾರ್ಯರು ಇನ್ನೂ ಚೆನ್ನಾಗಿ ರೂಪಕಗಳಂತೆ ಬರೆದಿರುವುದನ್ನು ನೋಡಿದರೆ ಅಂದು ಸಹ ಒಗಟುಗಳು ಸಾಹಿತ್ಯದಲ್ಲಿ ಮಹತ್ವದ ಸ್ಥಾನವನ್ನು ಪಡೆದಿದ್ದವು ಎಂಬುದು ತಿಳಿಯುತ್ತದೆ.

"ಅಂಬರದೊಳಗಾಡುವ ಪಕ್ಷಿ ತಾನಲ್ಲ
ಕೊಂಬು ಬಾಲಗಳುಂಟು ಮೃಗಜಾತಿಯಲ್ಲ
ಸಂಭ್ರಮದ ಬಿಲ್ಲುಂಟು ಎಸೆವಾತನಲ್ಲ
ಇದ ಹೇಳಬಲ್ಲ ಜಾಣರಿಗೆ ಅರಿದಲ್ಲ
ಗರಿಯುಂಟು ನೋಡಿದರೆ ಪಕ್ಷಿಕುಲ ತಾನಲ್ಲ
ಧರೆಯ ಬೆನ್ನಲಿ ಶಿರವ ಮಡಗಿಕೊಂಡಿಹುದು
ಬರಿಗಾಲ ಭಾರದಲಿ ನಡೆಯಲೊಲ್ಲದು ಮುಂದೆ
ಎರಡು ಮೈ ಒಂದಾಗಿ ಕೂಡಿಕೊಂಡಿಹುದು"[1]

ಇಂತಹ ವಿಶಿಷ್ಟ ರೂಪದ ರಚನೆಗಳನ್ನು ದಾಸಸಾಹಿತ್ಯದಲ್ಲಿ ಕಾಣುತ್ತೇವೆ. ಕನಕದಾಸರು ಇಂತಹ ವಿಶಿಷ್ಟ ಬರಹಗಳನ್ನು ಮುಂಡಿಗೆಗಳೆಂದು ಕರೆದರೆ, ಪುರಂದರದಾಸರು ಹಾಡಿನ ರೂಪದಲ್ಲಿಯೂ, ಕೃಷ್ಣ–ರುಕ್ಮಿಣಿಯರ ಸಂವಾದದ ರೂಪದಲ್ಲಿಯೂ ಬರೆದು ಗಮನ ಸೆಳೆದರು. ಕನಕದಾಸರು ಒಗಟನ್ನು ಗೂಢಾರ್ಥದಲ್ಲಿ ಮುಂಡಿಗೆಯ ರೂಪದಲ್ಲಿ ಬರೆದು ಅದನ್ನು ಅರ್ಥೈಸಲು ಜಾಣರಿಗೆ ಬಿಟ್ಟರು. ಆದರೆ ಪುರಂದರದಾಸರು ಹೇಳಬೇಕಾದ ಒಗಟು ಮತ್ತು ಅದರ ಅರ್ಥವನ್ನೂ ಕೃಷ್ಣ–ರುಕ್ಮಿಣಿಯರ ಸಂವಾದದ ರೂಪದಲ್ಲಿ ಬರೆದು ಜನಮನ್ನಣೆ ಗಳಿಸಿದರು. ಒಬ್ಬರು ಒಗಟನ್ನು ಹಾಕಿ ಸವಾಲೆಸೆದರೆ ಇನ್ನೊಬ್ಬರು ಅದನ್ನು ಬಿಡಿಸಿ ಅರ್ಥ ಹೇಳುವ ರೀತಿಯಲ್ಲಿ ಒಗಟುಗಳನ್ನು ರಚಿಸಿದರು. ಅಂತಹ ಅಪರೂಪದ ರಚನೆಗಳು ತ್ರಿಪದಿಗಳ ರೂಪದಲ್ಲಿಯೂ ದೊರೆತಿವೆ. ಇವುಗಳು ಶ್ರೀ ಕೃಷ್ಣನು ಹಾಕಿದ ಒಗಟುಗಳು, ಶ್ರೀಕೃಷ್ಣ ರುಕ್ಮಿಣಿಯರ

ಒಗಟುಗಳಲ್ಲಿ ಪ್ರಕಟವಾಗಿರುವುದನ್ನು ಕಾಣುತ್ತೇವೆ. ಶ್ರೀ ಕೃಷ್ಣನು ರುಕ್ಮಿಣಿಗೆ ಒಗಟುಗಳ ಸವಾಲುಗಳನ್ನು ನೀಡಿದರೆ ರುಕ್ಮಿಣಿಯು ಅಷ್ಟೇ ಬುದ್ಧಿಚಾತುರ್ಯದಿಂದ ಅವನ ಎಲ್ಲಾ ಒಗಟುಗಳನ್ನು ಬಿಡಿಸಿ ಅರ್ಥೈಸಿದ ರೀತಿಯಲ್ಲಿ ಪುರಂದರದಾಸರು ತಮ್ಮ ಒಗಟುಗಳನ್ನು ರಚಿಸಿದರು.

**"ಶ್ರೀಕೃಷ್ಣ:** ಹೊರಗೆ ಹಳ್ಳಿಯ ಕೋಟೆ ಒಳಗೆ ಬೆಳ್ಳಿಯ ಕೋಟೆ
ತಿಳಿನೀರು ಒಳಗೆ ಬಿಳಿಪೊಟ್ಟೆ । ಬಿಳಿಪೊಟ್ಟೆ ರುಕ್ಮಿಣಿ
ಕೆಳದಿ ಇದು ಒಗಟ ತಿಳಿಯೆಂದ
**ರುಕ್ಮಿಣಿ:** ಅಟ್ಟಂಬೊ ಅಡವಿಯಲಿ ನೆಟ್ಟನಾಮರ ಹುಟ್ಟಿ
ಕೊಟ್ಟ ಕೊನೆಯಲ್ಲಿ ಫಲನೀವ । ಫಲನೀವ ತೆಂಗಿನ
ಕಾಯಿ ಮತ್ತೇನು ಅರಸರೇ"[೨]

ತ್ರಿಪದಿಗಳಲ್ಲಿ ರಚನೆಯಾಗಿರುವ ಈ ಒಗಟುಗಳನ್ನು ಪುರಂದರದಾಸರು ರಚಿಸಿದ್ದು ಇವರ ರಚನೆಗಳು ಕನಕದಾಸರ ಮುಂಡಿಗೆಗಳಿಗಿಂತ ಭಿನ್ನವಾಗಿವೆ. ಪುರಂದರದಾಸರು ಶ್ರೀ ಕೃಷ್ಣನ ಮೂಲಕ ಸವಾಲನ್ನು ಹಾಕಿ, ರುಕ್ಮಿಣಿಯ ಮೂಲಕ ಆ ಸವಾಲಿಗೆ ಉತ್ತರವನ್ನು ನೀಡುವ ಈ ರಚನೆ ಅದ್ಭುತವೆನಿಸುತ್ತದೆ. ಮೇಲಿನ ಒಗಟನ್ನು ಗಮನಿಸಿದರೆ ಒಂದು ತೆಂಗಿನ ಕಾಯಿಯ ಬಾಹ್ಯ ಸ್ವರೂಪ ಮತ್ತು ಅದರ ಗುಣಗಳನ್ನು ಇಟ್ಟುಕೊಂಡು ಒಗಟು ರಚಿಸಿರುವ ಪುರಂದರದಾಸರ ರಚನೆ ಅದ್ಭುತವಾಗಿದೆ.

**"ಕೃಷ್ಣ :** ಎರಡು ಕಾಲುಗಳಾಗಿ ನಿಡಿದಾದ ಮೊಗವಾಗಿ
ದಾಳಿಂಬ ಚುಂಗು ತಲೆಯಲ್ಲಿ । ತಲೆಯಲ್ಲಿ ರುಕ್ಮಿಣಿ
ಮಡದಿ ಇದು ಒಗಟ ತಿಳಿಯೆಂದ
**ರುಕ್ಮಿಣಿ :** ಎರಡು ಕಾಲೂ ಅಹುದು ನಿಡಿದು ಮೊಗವು ಅಹುದು
ಬೆಳಗಾಗೆ ನಿಮ್ಮ ಪುರದಲ್ಲಿ । ಪುರದಲ್ಲಿ ಕೂಗುವ
ಕೋಳಿ ಮತ್ತೇನು ಅರಸರೇ"[೩]

ಈ ಮೇಲಿನ ಒಗಟಿನಲ್ಲಿ ಪುರಂದರದಾಸರು ನಿತ್ಯಜೀವನದಲ್ಲಿ ನಾವು ಕಾಣುವಂತಹ ಸಾಮಾನ್ಯ ವಿಚಾರಗಳನ್ನೆತ್ತಿಕೊಂಡು ಒಗಟನ್ನು ರಚಿಸಿದ್ದಾರೆ. ಇಲ್ಲಿ ಶ್ರೀ ಕೃಷ್ಣನ ಮಾತಿನಲ್ಲಿ ಒಂದು ಕೋಳಿಯ ದೇಹದ ಆಕಾರ, ಗುಣ, ಸ್ವರೂಪಗಳನ್ನು ಹೇಳಿ ಅದು ಏನು ಎಂದು ಕೇಳಿದಾಗ ಅವಕ್ಕೆಲ್ಲ ಸರಿಹೊಂದುವಂತೆ ಅಷ್ಟೇ ಪ್ರಖರವಾದ ಉತ್ತರವನ್ನು ರುಕ್ಮಿಣಿಯಿಂದ ಹೇಳಿಸಿರುವುದು ಪುರಂದರದಾಸರ ಮನೋಜ್ಞತೆಗೆ ಹಿಡಿದ ಕನ್ನಡಿಯಾಗಿದೆ. ಒಂದು ಮುಂಡಿಗೆಯನ್ನು ಸಂವಾದದ ರೂಪದಲ್ಲಿ ರಚಿಸಿ ಅದನ್ನು ಜನರಿಗೆ ತಲುಪಿಸಿ ತಿಳುವಳಿಕೆ ಮೂಡಿಸುವ ಪ್ರಯತ್ನದಲ್ಲಿ ಗೆದ್ದವರೆಂದರೆ ಪುರಂದರದಾಸರು. ಹೀಗೆ ಪುರಂದರದಾಸರು ಸಂವಾದದ ರೂಪದಲ್ಲಿ ಹರಿದಾಸ ಸಾಹಿತ್ಯದಲ್ಲಿ ಅನೇಕ ಒಗಟುಗಳನ್ನು ಬರೆದಿದ್ದಾರೆ. ಈ ಮುಂಡಿಗೆಗಳನ್ನು ಹೋಲುವ ಒಗಟುಗಳನ್ನು ದಾಸಾರ್ಯರು ಏಕೆ ರಚಿಸಿರಬಹುದು ಎಂಬುದನ್ನು ನೋಡಿದಾಗ ವಿದ್ವಾಂಸರುಗಳು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ.

ವಚನಸಾಹಿತ್ಯದಲ್ಲಿ ಅಲ್ಲಮಪ್ರಭುವಿನ ಬೆಡಗಿನ ವಚನಗಳಂತೆ ದಾಸಸಾಹಿತ್ಯದಲ್ಲಿ ಮುಂಡಿಗೆಗಳು ಕಂಡುಬರುತ್ತವೆ. ಆದರೆ ಈ ಮುಂಡಿಗೆಗಳು ವಚನಸಾಹಿತ್ಯದ ಬೆಡಗಿನ ವಚನಗಳಿಗಿಂತ ಭಿನ್ನವಾಗಿವೆ. ದಾಸಾರ್ಯರು ಗೂಢಾರ್ಥವುಳ್ಳ ಇಂತಹ ಒಗಟುಗಳನ್ನು, ಸಂವಾದಿಯಾಗುಳ್ಳ ಸಾಹಿತ್ಯ ಪ್ರಕಾರವನ್ನು ಏಕೆ ರಚಿಸಿದರೆಂಬುದನ್ನು ತಿಳಿಸಲು ಬುರ್ಲಿ ಬಿಂದು ಮಾಧವರಾವ್ ಅವರು ಈ ಕೆಳಗಿನ ಕಾರಣಗಳನ್ನು ನೀಡಿದ್ದಾರೆ.[4]

1. ಕೆಲವು ಕೀರ್ತನೆಗಳು ಪಾಂಡಿತ್ಯ ಪ್ರದರ್ಶನಕ್ಕಾಗಿ ಇರಬೇಕು.
2. ಇನ್ನೂ ಕೆಲವು ಪಾಂಡಿತ್ಯ ಪರೀಕ್ಷೆಗಾಗಿ ಇದ್ದಂತೆ ಕಾಣುತ್ತದೆ.
3. ಮತ್ತೆ ಕೆಲವು ಬುದ್ಧಿ ಪೂರ್ವಕವಾಗಿ ಗುಹ್ಯ ಭಾಷೆಯಲ್ಲಿ ಹೇಳಿರಬಹುದು.
4. ಕೆಲವೊಮ್ಮೆ ಜ್ಞಾನಿ ಜ್ಞಾನಿಗಳ ಆಂತರಿಕ ಭಾಷೆಯಾಗಿ ಹೊರಹೊಮ್ಮಿರಬಹುದು.
5. ಆತ್ಮಾನುಭವ ಹಾಗೂ ತತ್ವಜ್ಞಾನವನ್ನು ವಿವರಿಸಿರಬಹುದು.
6. ಪಂಡಿತರನ್ನೂ,ಪೌರಾಣಿಕರನ್ನೂ ಕೆಣಕಿದ ಕೆಲವು ಹಾಡುಗಳನ್ನೂ ಕಾಣಬಹುದು.

ದಾಸಸಾಹಿತ್ಯದಲ್ಲಿ ಮುಂಡಿಗೆಗಳಿಂದಲೇ ಸಾಕಷ್ಟು ಜನಪ್ರಿಯವಾದವರು ಕನಕದಾಸರು. ಪುರಂದರದಾಸರು ಒಗಟುಗಳನ್ನು ರಚಿಸಿದರು. ಆದರೆ ಕನಕದಾಸರ ಮುಂಡಿಗೆಗಳಿಗಿಂತ ಪುರಂದರದಾಸರು ರಚಿಸಿದ ಒಗಟುಗಳು ಭಿನ್ನವಾಗಿದ್ದವು. ಕನಕದಾಸರ ಮುಂಡಿಗೆಗಳು ಪಂಡಿತರಿಗೆ ಸಮಸ್ಯೆಗಳನ್ನು ಒಡ್ಡುತ್ತವೆ ಆದರೆ ಪುರಂದರದಾಸರ ಒಗಟುಗಳು ಸಂವಾದದ ರೀತಿಯಲ್ಲಿ ಸಮಸ್ಯೆಯನ್ನು ಸೃಷ್ಟಿಸಿ ಅದಕ್ಕೆ ಪರಿಹಾರವನ್ನು ಮತ್ತೊಬ್ಬರ ಬಾಯಿಂದ ಹೇಳಿಸುವ ರೀತಿಯಲ್ಲಿ ಇವರ ರಚನೆಗಳನ್ನು ಕಾಣುತ್ತೇವೆ. ಈ ಸಂವಾದಕ್ಕಾಗಿ ಪುರಂದರದಾಸರು ಆರಿಸಿಕೊಂಡಿದ್ದು ಕೃಷ್ಣ–ರುಕ್ಮಿಣಿಯರ ಸಂವಾದದ ಮಾತುಗಳನ್ನು. ಕೆಲವೊಂದು ಒಗಟುಗಳು ಕೃಷ್ಣನಿಂದ ಬಂದು ಅದಕ್ಕೆ ಉತ್ತರ ರುಕ್ಮಿಣಿ ನೀಡುವಂತೆ, ಇನ್ನು ಕೆಲವು ಒಗಟುಗಳು ರುಕ್ಮಿಣಿಯಿಂದ ಬಂದು ಪ್ರತ್ಯುತ್ತರವಾಗಿ ಕೃಷ್ಣನು ಉತ್ತರ ಹೇಳುವ ರೀತಿಯಲ್ಲಿ ಪುರಂದರದಾಸರು ಒಗಟುಗಳನ್ನು ರಚಿಸಿದ್ದಾರೆ. ಇದಕ್ಕೆ ನಿದರ್ಶನವೆಂಬಂತೆ ಈ ಕೆಳಗಿನ ಒಗಟನ್ನು ಕಾಣುತ್ತೇವೆ.

"ಒಬ್ಬನ ಕಟ್ಟಿದ್ದೆ ಒಬ್ಬನ ಬಿಚ್ಚಿದ್ದೆ
ಒಬ್ಬನ ಕರೆದು ಒಳಗೊಯ್ದೆನೆಂದರೆ
ಶ್ರೀಕೃಷ್ಣ ಕೋಪ ಬಲಿದೆದ್ದ ॥

ಯಾವನ ಕಟ್ಟಿದ್ದೆ ಯಾವನ ಬಿಚ್ಚಿದ್ದೆ
ಯಾವನ ಕರೆದು ಒಳಗೊಯ್ದೆ ರುಕ್ಮಿಣಿ
ಹೇಳೆನುತ ಬೀಸಿದಲಗವ ॥
ಆಕಳ ಕಟ್ಟಿದ್ದೆ ಕರುವನು ಬಿಚ್ಚಿದ್ದೆ
ಹಾಲನ್ನು ಕರೆದು ಒಳಗೊಯ್ದೆನೆಂದರೆ
ಭೂಮೀಶ ಮುಗುಳುನಗೆ ನಕ್ಕ ॥"[5]

ಇಲ್ಲಿ ಶ್ರೀಕೃಷ್ಣ ರುಕ್ಮಿಣಿಯರ ನಡುವೆ ಸಂವಾದ ನಡೆಯುತ್ತಿದೆ. ರುಕ್ಮಿಣಿ ಕೇಳಿದ ಒಗಟಿಗೆ ಸೂಕ್ತವಾಗಿ ಶ್ರೀಕೃಷ್ಣ ಉತ್ತರಿಸುವ ಸಂದರ್ಭವನ್ನು ಈ ಒಗಟಿನಲ್ಲಿ ಕಾಣುತ್ತೇವೆ. ಒಂದು ಆಕಳು, ಕರು, ಹಾಲುಕರೆಯುವ ಸಂದರ್ಭವನ್ನು ಗೂಢಾರ್ಥದಲ್ಲಿ ಹೇಳಿ ಅದಕ್ಕೆ ಪರಿಹಾರವನ್ನು ತಮ್ಮ ಮಾತುಗಳಲ್ಲೇ ನೀಡುವ ಪುರಂದರದಾಸರ ಪಾಂಡಿತ್ಯ ವೈಶಿಷ್ಟ್ಯಪೂರ್ಣದ್ದು.

ಹರಿದಾಸ ಸಾಹಿತ್ಯದಲ್ಲಿ ಕೆಲವೇ ದಾಸಾರ್ಯರು ಇಂತಹ ರಚನೆಗಳಿಗೆ ಮುನ್ನುಡಿ ಬರೆದರೂ ಬರೆದ ಎಲ್ಲಾ ಸಾಹಿತ್ಯ ಇಂದಿನ ಸಮಾಜಕ್ಕೆ ದಾಸಾರ್ಯರು ನೀಡಿದ ಅದ್ಭುತ ಕೊಡುಗೆಯಾಗಿದೆ. ದಾಸಸಾಹಿತ್ಯದಲ್ಲಿ ಇಂತಹ ರಚನೆಗಳು ಇನ್ನೂ ಕೆಲವು ದಾಸರುಗಳಿಂದ ರಚಿತವಾಗಿರಬಹುದು. ಅದಕ್ಕಾಗಿ ದಾಸಸಾಹಿತ್ಯದಲ್ಲಿ ಅಡಗಿಕುಳಿತ ಒಗಟುಗಳನ್ನು ಹೊರತರಲು ಸಂಶೋಧನೆಗಳು ನಡೆಯಬೇಕಿದೆ. ಬುದ್ಧಿಕೌಶಲ್ಯವನ್ನು ಪರೀಕ್ಷೆಮಾಡುವಂತಹ ಒಗಟುಗಳನ್ನು ಅಂದಿನ ಕಾಲದಲ್ಲಿಯೇ ದಾಸಾರ್ಯರು ಪ್ರಯೋಗಮಾಡಿದ್ದರು ಎಂಬುದು ನಮ್ಮ ಕನ್ನಡ ಸಾಹಿತ್ಯಕ್ಷೇತ್ರಕ್ಕೆ ದಾಸಾರ್ಯರ ಕೊಡುಗೆ ಎಂಥದ್ದು ಎಂಬುದನ್ನು ತಿಳಿಸುತ್ತದೆ. ಇಂತಹ ಅಪರೂಪದ ಸಾಹಿತ್ಯದ ಕುರಿತು ಹೆಚ್ಚಿನ ಸಂಶೋಧನೆಗಳು ನಡೆದಾಗ ಮಾತ್ರ ನಮ್ಮ ಹರಿದಾಸ ಸಾಹಿತ್ಯದ ಕೊಡುಗೆಯ ಮಹತ್ವ ಇನ್ನೂ ಹೆಚ್ಚುತ್ತದೆ.

**ಅಡಿಟಿಪ್ಪಣಿಗಳು:**

1. ಸುನಂದಮ್ಮ. ಆರ್., ದಾಸಸಾಹಿತ್ಯದಲ್ಲಿ ಜಾನಪದ ಅಂಶಗಳು ಒಂದು ಅಧ್ಯಯನ, 1994, ಪುಟ–127.
2. ಹರಿದಾಸರತ್ನಂ ಗೋಪಾಲದಾಸರು.,(ಸಂ) ಶ್ರೀ ಹರಿದಾಸಭಾರತಿ ಮಾಸಪತ್ರಿಕೆ ಸಂಪುಟ–10, 1960, ಪುಟ–259.
3. ಅದೇ, ಪುಟ–160.
4. ಶ್ರೀಕಾಂತ ಮಿಶ್ರಿಕೋಟಿ., ಕನಕದಾಸರ ಮುಂಡಿಗೆಗಳು(ಲೇಖನ), ಅಂತರ್ಜಾಲ ಪ್ರಕಟಣೆ ಗುರುವಾರ 26/11/2020.
5. ಹರಿದಾಸರತ್ನಂ ಗೋಪಾಲದಾಸರು.,(ಸಂ) ಶ್ರೀ ಹರಿದಾಸಭಾರತಿ ಮಾಸಪತ್ರಿಕೆ ಸಂಪುಟ–10, 1960, ಪುಟ–204.

**ಆಧಾರ ಗ್ರಂಥಗಳು:**

1. ಒಗಟುಗಳ ಕುರಿತು ಅಂತರ್ಜಾಲದಲ್ಲಿ ದೊರೆತ ಮಾಹಿತಿಗಳು.
2. ಸುನಂದಮ್ಮ ಆರ್., ದಾಸಸಾಹಿತ್ಯದಲ್ಲಿ ಜಾನಪದ ಅಂಶಗಳು ಒಂದು ಅಧ್ಯಯನ, ಮೈಸೂರು ವಿಶ್ವವಿದ್ಯಾಲಯ ಕನ್ನಡ ಅಧ್ಯಯನ ಸಂಸ್ಥೆ ಮೈಸೂರು, 1994.
3. ಹರಿದಾಸರತ್ನಂ ಗೋಪಾಲದಾಸರು., ಶ್ರೀ ಹರಿದಾಸ ಭಾರತಿ ಮಾಸಪತ್ರಿಕೆ ಸಂಪುಟ–10, 1960.